ಅಪ್ಪ ಆ ದಿನ ಮಧ್ಯಾಹ್ನ ಲಗುಬಗೆಯಿಂದ ಮನೆಗೆ ಬಂದಾಗ ತಾನು ಸಾಯಂಕಾಲದ ಪೂಜೆಗೆಂದು ಹೂ ಕಟ್ಟುತ್ತಿದ್ದೆ. ಅಪ್ಪ ನೇರ ಒಳಗೆ ಹೋಗಿ ಅಮ್ಮನೊಡನೆ ಮಾತಾಡಿದ್ದು ನಿನ್ನೆ ಮೊನ್ನೆಯೇನೋ ಎಂಬಂತೆ ನೆನಪಿದೆ ತನಗೆ.

'ಈವೊತ್ತು ಗೌತಮರು ಬರ್‍ತಿದ್ದಾರೆ ಕಣೇ.'

'ಹೌದಾ?'

'ಹೂಂ. ಒಂದೆರಡು ದಿನ ಇಲ್ಲೇ ಇರ್‍ತಾರೆ.'

ಮುಂದಿನ ಮಾತು ಕೇಳಿಸಿಕೊಳ್ಳುವಷ್ಟು ಆಸಕ್ತಿಯಿರಲಿಲ್ಲ ತನಗೆ. ಆಶ್ರಮವಾಸಿಗಳು ಆಗಾಗ ಗೌತಮರ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು. ಆತ ಮಹಾ ತಪಸ್ವಿಯಂತೆ. ಚಿಕ್ಕ ವಯಸ್ಸಿಗೇನೇ ಅಗಾಧಪಾಂಡಿತ್ಯ ಪಡೆದುಕೊಂಡಿದ್ದಾನಂತೆ. ಬೇಯಿಸಿದ ಪದಾರ್ಥಗಳನ್ನು ಎಂದೂ ತಿನ್ನುವುದಿಲ್ಲವಂತೆ. ಕೇವಲ ಗೆಡ್ಡೆ ಗೆಣಸುಗಳು, ಗಾಳಿ, ನೀರು ಇಷ್ಟನ್ನು ಮಾತ್ರವೇ ಸೇವಿಸುತ್ತಾನಂತೆ. ಧ್ಯಾನಕ್ಕೆ ಕುಳಿತರೆ ಯಾವ ಪರಿವೆಯೂ ಇರುವುದಿಲ್ಲ ಎನ್ನುತ್ತಾರೆ.

ಇದ್ದರೆ ಇದ್ದೀತು. ತನಗೇನು? ತನ್ನ ಪಾಲಿಗಂತೂ ಅಪ್ಪನೇ ಮಹಾ ತಪಸ್ವಿ. ಮಹಾಜ್ಞಾನಿ! ಹೂ ಕಟ್ಟಿ ಎತ್ತಿಟ್ಟು ಸಂಪಿಗೆ ಬಿಡಿಸಿ ತರಲು ನಡೆದಿದ್ದಳು.

ಮುಂದಿನ ಒಂದೇ ಮಾಸದ ಅವಧಿಯ ನಂತರ ಅಹಲ್ಯೆ ಗೌತಮರ ಮಡದಿಯಾದಳು. ವಾತ್ಸಲ್ಯಮಯ ತಂದೆಮನೆಯಿಂದ ಅಗಲಿಕೆಯ ಕಂಬನಿಯೊಡನೆ ಬೀಳ್ಕೊಂಡು. ಬಯಕೆ ತುಂಬಿಕೊಂಡು ಪತಿಗೃಹಕ್ಕೆ ಕಾಲಿಟ್ಟಿದ್ದಳು.

ಗೌತಮರ ಆಶ್ರಮ ನಗರಕ್ಕೆ ತುಂಬ ದೂರವಾಗಿ ಕಾಡಿನ ನಡುವಿತ್ತು. ಕುಟೀರದ ಹೊರಕ್ಕೆ ಬಂದು ನಿಂತರೆ ದೃಷ್ಟಿಯಳತೆಯಲ್ಲೇ ಕಾಣುವ ನದಿ. ದಟ್ಟ ಅಡವಿ. ತುಂಬ ಸುಂದರ ಪ್ರಕೃತಿ. ಆದರೆ, ಇಡೀ ಆಶ್ರಮದಲ್ಲಿ ಅಹಲ್ಯೆ, ಗೌತಮ, ಒಂದಿಬ್ಬರು ಕೆಲಸದವರು, ನಾಲ್ಕಾರು ಜನ ಶಿಷ್ಯ–ಶಿಷ್ಯೆಯರನ್ನು ಬಿಟ್ಟರೆ, ಬೇರೆ ಜನಸಂಪರ್ಕವೇ ಇಲ್ಲ! ಒಮ್ಮೊಮ್ಮೆ ಅಹಲ್ಯೆಗೆ ಭಯ! ಮತ್ತೊಮ್ಮೆ ಒಂಟಿತನ!

ಜೊತೆಗಿನ್ನೊಂದು ವಿಚಿತ್ರ ಅನುಭವ... ಗೌತಮ ಜಡನೇ! ಛೇ... ಖಂಡಿತಾ ಅಲ್ಲ. ಸುಖ ಇಲ್ಲವೆಂದಲ್ಲ. ಆದರೆ, ಅವಳು ಬಯಸಿದಂತೆ ಇರಲಿಲ್ಲ. ಊಟ ನಿದ್ರೆಯಂತೆ ಅನಿವಾರ್ಯವಾಗಿ ಒಂದೆರಡು ಕ್ಷಣಗಳಲ್ಲಿ ಮುಗಿದು ಹೋಗುವ ಕ್ರಿಯೆ!

ಕನಸುಗಳು ಕರಗಿ ಸೋರಿ ಹೋಗಿ, ಒಳಗೆಲ್ಲ ಖಾಲಿಯಾದ ಅನುಭವ!

ಬೆಳಗಿನ ನಸುಕಿಗೇ ಶುರುವಾಗುವ ದಿನಚರಿ!

ಗೌತಮ ಅಷ್ಟು ಹೊತ್ತಿಗೇ–ಅವಳಿಗೆ ಇನ್ನೂ ತಬ್ಬಿಕೊಂಡು ಮಲಗಿರಬೇಕೆಂಬ ಬಯಕೆ ಬಲಿತಿರುವಾಗಲೇ ಎದ್ದು ನದಿಗೆ ಹೋಗಿ ಬಿಡುತ್ತಿದ್ದ! ಅತ್ತ ಎಚ್ಚರವೂ ಅಲ್ಲದೆ, ಇತ್ತ ನಿದ್ರೆಯೂ ಇಲ್ಲದೆ ಅಯೋಮಯ ಸ್ಥಿತಿಯಲ್ಲಿ ಒದ್ದಾಡುತ್ತಿದ್ದ ಅಹಲ್ಯೆ ಮೂಡೂ ಬಿಳುಪೇರಿದಾಗ, ಎದ್ದು ಹೊರಬರುತ್ತಿದ್ದಳು.

ಆಶ್ರಮದ ಇತರ ಮಹಿಳೆಯರು ಆಗಲೇ ಎದ್ದು ಅಂಗಳ, ಕೊಟ್ಟಿಗೆಗಳನ್ನು ಗುಡಿಸಿ, ಒರೆಸಿ ಸ್ವಚ್ಛಮಾಡಿ, ಆಕಳುಗಳ ಹಾಲನ್ನೂ ಕರೆದಿಟ್ಟಿರುತ್ತಿದ್ದರು. ಪತಿ ನದಿಯಿಂದ ಸ್ನಾನ ಇತ್ಯಾದಿಗಳನ್ನು ಮುಗಿಸಿ ಬರುಷ್ಟರಲ್ಲಿ ಪೂಜೆಗೆ ಹೂ ಕೊಯ್ದು, ಅಣಿ ಮಾಡಿಡುವುದಷ್ಟೇ ಕೆಲಸ. ಅನಂತರ ನೀರು ತರುವುದು, ಗುಡಿಸಿಲು ಸ್ವಚ್ಛಗೊಳಿಸಿಕೊಳ್ಳುವುದು, ನದಿಯಲ್ಲಿ ಮಿಂದು ದೇವರನ್ನರ್ಚಿಸಿದರೆ ಮುಗಿಯಿತು. ದಿನವೆಲ್ಲ ಖಾಲಿ, ಖಾಲಿ!

ಒಳ್ಳೆಯ ಭೋಜನವನ್ನಾದರೂ ತಯಾರಿಸೋಣ ಎಂದುಕೊಂಡರೆ ಗೌತಮ ಬೇಯಿಸಿದ ಪದಾರ್ಥಗಳನ್ನು ಹೆಚ್ಚು ತಿನ್ನುವುದೇ ಇಲ್ಲ! ತಾನೊಬ್ಬಳೇ ತಿನ್ನಲು ಹೇಗೆ ಮನಸ್ಸು ಬಂದೀತು?